2,500 ಕ್ಕಿಂತಲೂ ಹೆಚ್ಚಿದ್ದಲ್ಲಿ ಅಂತಹ ಸನ್ನದುಗಳನ್ನು ಮುಂದುವರೆಸಿಕೊಂಡು ಹೋಗಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಇಂತಹ ಅಂಗಡಿಗಳನ್ನು ರದ್ದುಪಡಿಸುವ ಉದ್ದೇಶ ಸರ್ಕಾರಕ್ಕೆ ಇಲ್ಲ.

ಇ) ಉದ್ಭವಿಸುವುದಿಲ್ಲ.

ಸಾರಾಯಿ ಗುತ್ತಿಗೆ ಮತ್ತು ಮಾರಾಟದ ವ್ಯವಸ್ಥೆ.

1664(2385) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರದ ಈಗಿರುವ ಸಾರಾಯಿ ಗುತ್ತಿಗೆ ಮತ್ತು ಮಾರಾಟದ ವ್ಯವಸ್ಥೆಯನ್ನು ಬದಲಾಯಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಇದ್ದರೆ ಆ ವ್ಯವಸ್ಥೆಯ ರೂಪುರೇಷೆಗಳೇನು?

ಇ) ಅನಧಿಕೃತ ಸಾರಾಯಿ ಅಂಗಡಿಗಳನ್ನು ಮುಚ್ಚಿಸುವ ಕಾರ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಆಗಿರುವ ಪ್ರಗತಿ ಎಷ್ಟು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) 1998-99ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟಾರೆ 566 ಅನಧಿಕೃತ ಸಾರಾಯಿ ಅಂಗಡಿಗಳು ಕಂಡು ಬಂದಿದ್ದು, ಅವುಗಳನ್ನು ಮುಚ್ಚಿಸಲಾಗಿರುತ್ತದೆ.

ರಾಜ್ಯದ ಸಚಿವರುಗಳು ಪಡೆದುಕೊಂಡಿರುವ ಪ್ರವಾಸಭತ್ಯೆಗಳು.

1665(2362) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(1) 1998-99ನೇ ಸಾಲಿನಲ್ಲಿ ರಾಜ್ಯದ ಸಚಿವರುಗಳು ಪಡೆದುಕೊಂಡಿರುವ ಪ್ರವಾಸಭತ್ಯೆದ ಒಟ್ಟು ಮೊಬಲಗೆಷ್ಟು? (ಪ್ರತ್ಯೇಕ ವಿವರ ನೀಡುವುದು)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

(1) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

1998-99ನೇ ಏಪ್ರಿಲ್ ತಿಂಗಳಿಂದ 1999ನೇ ಮಾರ್ಚ್ ತಿಂಗಳಿನವರೆಗೆ ಸಚಿವ ಸಂಪುಟ ಸಚಿವರು ಮತ್ತು ರಾಜ್ಯ ಸಚಿವರುಗಳು ಕೈಗೊಂಡ ಪ್ರವಾಸ ವೆಚ್ಚದ ವಿವರಗಳು

ಸನ್ಮಾನ್ಯ ಸಚಿವರುಗಳಾದ:

1)	ಶ್ರೀ ಜೆ.ಹೆಚ್. ಪಟೇಲ್, ಮುಖ್ಯಮಂತ್ರಿಗಳು	4,89,697-00
2)	ಶ್ರೀ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿಗಳು	6,15,558-00
3)	ಶ್ರೀ ಎಂ.ಪಿ. ಪ್ರಕಾಶ್, ಗ್ರಾ.ಅಭಿವೃದ್ಧಿ, ಪ.ರಾಜ್ ಸಚಿವರು	5,87,064-00
4)	ಶ್ರೀ ಪಿ.ಜಿ.ಆರ್. ಸಿಂಧ್ಯಾ, ಗೃಹ ಸಚಿವರು	5,39,433-00
5)	ಶ್ರೀ ಸಿ. ಬೈರೇಗೌಡ, ಕೃಷಿ ಸಚಿವರು	6,19,053-00
6)	ಶ್ರೀ ಎಂ.ಸಿ. ನಾಣಯ್ಯ, ಕಾನೂನು ಸಚಿವರು	7,16,598-00
7)	ಶ್ರೀ ಹೆಚ್.ಜಿ. ಗೋವಿಂದೇಗೌಡ, ಪ್ರೌಢ ಶಿಕ್ಷಣ ಸಚಿವರು	8,95,792-00
8)	ಶ್ರೀ ತಿಪ್ಪೇಸ್ವಾಮಿ, ಸಣ್ಣ ನೀರಾವರಿ ಸಚಿವರು	6,16,188-00
9)	ಶ್ರೀ ಹೆಚ್.ಸಿ. ಮಹದೇವಪ್ಪ ಆರೋಗ್ಯ ಸಚಿವರು	6,20,333-00
10)	ಶ್ರೀ ಎಸ್.ಎಸ್. ಪಾಟೀಲ್ ಸಹಕಾರ ಸಚಿವರು	6,35,803-00
11)	ಶ್ರೀ ಜಿ. ಬಸವಣ್ಣಪ್ಪ, ಆಹಾರ ಮತ್ತು ನಾಗರೀಕ ಸಚಿವರು	3,68,915-00
12)	ಶ್ರೀ ಕೆ.ಎಂ. ಕೃಷ್ಣಾರೆಡ್ಡಿ, ಸಮಾಜ ಕಲ್ಯಾಣ ಸಚಿವರು	2,94,326-00
13)	ಶ್ರೀ ಕೆ.ಎನ್. ನಾಗೇಗೌಡ, ಭಾರಿ ನೀರಾವರಿ ಸಚಿವರು	5,57,156-00
14)	ಶ್ರೀ ಎಂ.ಎಸ್. ಪಾಟೀಲ್, ನಗರಾಭಿವೃದ್ಧಿ ಸಚಿವರು	3,89,095-00
15)	ಶ್ರೀ ಬಿ.ಎನ್. ಬಚ್ಚೇಗೌಡ, ಸಾರಿಗೆ ಸಚಿವರು	6,18,567-00
16)	ಶ್ರೀ ವಿ. ಸೋಮಶೇಖರ್, ಕಂದಾಯ ಸಚಿವರು	5,43,538-00
17)	ಶ್ರೀ ಬಿ.ಎ. ಮೊಹಿದ್ದೀನ್ ಉನ್ನತ ಶಿಕ್ಷಣ ಸಚಿವರು	5,72,196-00
18)	ಶ್ರೀ ಉಮೇಶ್ ಕತ್ತಿ, ಲೋಕೋಪಯೋಗಿ ಸಚಿವರು	5,70,692-00
19)	ಶ್ರೀ ಸಿ.ಎಂ. ಉದಾಸಿ, ಜವಳಿ ಸಚಿವರು	7,74,388-00
20)	ಶ್ರೀ ಎಂ. ಮಾಲೀಕಯ್ಯ ಗುತ್ತೇದಾರ್, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಸಚಿವರು	12,58,676-00

21)	ಶ್ರೀಮತಿ. ಲೀಲಾದೇವಿ ಆರ್. ಪ್ರಸಾದ್, ಕನ್ನಡ ಮತ್ತು ಸಂಸ್ಕೃತಿ ಸಚಿವರು	4,96,695-00
22)	ಶ್ರೀ ಆರ್. ರೋಷನ್‌ಬೇಗ್, ವಕ್ಫ್ ಮತ್ತು ಪ್ರ. ಸಚಿವರು	4,37,650-00
23)	ಶ್ರೀ ಮುನಿಯಪ್ಪ ಮುದ್ದಪ್ಪ, ಮುಜರಾಯಿ ಸಚಿವರು	6,83,080-00
24)	ಶ್ರೀ ಮೀರಾಜುದ್ದೀನ್ ಎನ್. ಪಟೇಲ್, ಪೌ. ಸಚಿವರು	5,78,070-00
25)	ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ, ಬಂದರು ಮತ್ತು ಮೀನುಗಾರಿಕೆ ಸಚಿವರು	6,19,812-00
26)	ಶ್ರೀ ಶರಣಬಸಪ್ಪ ದರ್ಶಾನಪುರ, ಇಂಧನ ಸಚಿವರು	5,49,369-00
27)	ಶ್ರೀ ಎಂ. ಸತ್ಯನಾರಾಯಣ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು	7,65,542-00
28)	ಶ್ರೀ ಹೆಚ್.ಡಿ. ರೇವಣ್ಣ, ವಸತಿ ಸಚಿವರು	8,53,777-00
29)	ಶ್ರೀ ಹೆಚ್. ನಾಗಪ್ಪ ಕೃಷಿ ಮಾರುಕಟ್ಟೆ ಸಚಿವರು	3,00,396-00
30)	ಶ್ರೀ ಆರ್. ಕೃಷ್ಣಪ್ಪ ವಯಸ್ಕರ ಶಿಕ್ಷಣ ಸಚಿವರು	86,434-00
31)	ಶ್ರೀ ಬಿ.ಬಿ. ನಿಂಗಯ್ಯ ಪಶುಸಂಗೋಪನೆ ಸಚಿವರು	6,05,762-00
32)	ಶ್ರೀ ಬಿ. ಸೋಮಣ್ಣ, ನಗರಾಭಿವೃದ್ಧಿ (ಬೆಂಗಳೂರು) ಸಚಿವರು	7,80,618-00
33)	ಶ್ರೀ ಎಂ. ವರದೇಗೌಡ, ಉದ್ಯೋಗ ವಿನಿಮಯ	9,09,248-00
34)	ಡಾ: ಎಂ. ಶಂಕರ್‌ನಾಯಕ್, ವೈದ್ಯಕೀಯ ಶಿಕ್ಷಣ	4,46,174-00
35)	ಶ್ರೀ ಆರ್. ವೆಂಕಟೇಶ್, ಕಾಡಾ ಪ್ರದೇಶಾಭಿವೃದ್ಧಿ ಸಚಿವರು	4,67,269-00
36)	ಶ್ರೀಮತಿ ವಿಮಲಾಬಾಯಿ ದೇಶ್‌ಮುಖ್ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು	4,95,796-00
37)	ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ, ಬಂದಿಖಾನೆ ರಾಜ್ಯ ಸಚಿವರು	4,53,880-00
38)	ಶ್ರೀ ಬಿ.ಎಲ್. ಶಂಕರ್, ಭಾರಿ ಕೈಗಾರಿಕೆ ಸಚಿವರು	34,168-00
39)	ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್, ಸಣ್ಣ ಕೈಗಾರಿಕೆ ಸಚಿವರು	3,18,329-00
40)	ಶ್ರೀ ಎ.ಬಿ. ಪಾಟೀಲ್, ಗಣಿ ಸಚಿವರು	5,20,125-00
41)	ಶ್ರೀ ಹೆಚ್. ಶಿವಪ್ಪ, ಸಕ್ಕರೆ ಸಚಿವರು	4,81,085-00

42)	ಶ್ರೀ ಡಿ. ನಾಗರಾಜಯ್ಯ ರೇಷ್ಮೆ ಸಚಿವರು	---
43)	ಶ್ರೀ ಬಿ.ಟಿ. ಜಯಕುಮಾರ್, ಮಾಜಿ ತೋಟಗಾರಿಕೆ ಸಚಿವರು	4,04,348-00
44)	ಶ್ರೀ ಸಿ.ಎಸ್. ಜಯವಂತ್, ಅಬಕಾರಿ ಸಚಿವರು	5,61,953-00
45)	ಶ್ರೀ ಡಿ. ಮಂಜುನಾಥ್, ಅರಣ್ಯ ಸಚಿವರು	4,16,822-00
46)	ಶ್ರೀ ಎಂ.ಸಿ. ಮನಗೊಳಿ, ಗ್ರಾ.ಅ. ರಾಜ್ಯ ಸಚಿವರು	4,95,903-00
47)	ಶ್ರೀ ನಾಗಪ್ಪ ಸಾಲೋನಿ, ಯುವಜನ ಮತ್ತು ಕ್ರೀಡಾ ಸಚಿವರು	2,85,248-00
48)	ಶ್ರೀ ಅನಂತನಾಗ್, ಮಾಹಿತಿ ತಂತ್ರಜ್ಞಾನ ಸಚಿವರು	1,93,320-00
49)	ಶ್ರೀ ಆರ್.ವಿ. ದೇಶಪಾಂಡೆ, ಮಾಜಿ ಬೃಹತ್ ಕೈಗಾರಿಕೆ ಸಚಿವರು	1,28,875-00
50)	ಶ್ರೀ ರಮೇಶ್ ಜಿಗಜಿಣಗಿ, ಮಾಜಿ ಕಂದಾಯ ಸಚಿವರು	47,360-00
51)	ಶ್ರೀ ದಿ: ಎಸ್.ಡಿ. ಜಯರಾಮ್, ಮಾಜಿ ಗಣಿ ಸಚಿವರು	18,056-00
52)	ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾಜಿ ಅರಣ್ಯ ಸಚಿವರು	29,834-00
53)	ಶ್ರೀ ಅಜಯ್ ಕುಮಾರ್ ಸರ್ನಾಯಕ್ ಮಾಜಿ ಯುವಜನ ಸೇವಾ ಸಚಿವರು	37,78೨-00
	ಒಟ್ಟು	2,57,86,451-00

ಮಂಗಳೂರಿನಲ್ಲಿ ಪೋಲೀಸ್ ಸ್ಟೇಷನ್‌ಗಳ ನಿರ್ಮಾಣ.

1668 (2389) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಮಂಗಳೂರಿನಲ್ಲಿ ಪೋಲೀಸ್ ಸ್ಟೇಷನ್‌ಗಳನ್ನು ನಿರ್ಮಿಸಲು ಸರ್ಕಾರಿ ಜಮೀನನ್ನು ಕಾದಿರಿಸಲಾಗಿದೆಯೇ?

2) ಹಾಗಿದ್ದಲ್ಲಿ, ಆ ಸ್ಥಳಗಳಾವುವು? ಪೋಲೀಸ್ ಸ್ಟೇಷನ್ ಕಟ್ಟಡ ನಿರ್ಮಿಸಲು ಬೇಕಾಗುವ ಅನುದಾನ ಎಷ್ಟು?

3) ಅದನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು? ಅನುದಾನವನ್ನು ಬಿಡುಗಡೆ ಮಾಡಲಾಗುವುದು?

4) ಮಂಗಳೂರಿನಲ್ಲಿ ಹೊಸ ಪೋಲೀಸ್ ವಸತಿ ಗೃಹಗಳನ್ನು ನಿರ್ಮಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ? ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?